**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

'ಧರ್ಮ' ಪದಕ್ಕೆ 'ನಡವಳಿಕೆ' ಎಂಬ ಅರ್ಥವೂ ಇದೆ. ಮಾನವರಾದ ನಮ್ಮ ನಡವಳಿಕೆ ಹೇಗಿರಬೇಕೆಂದು ಈ ಶ್ಲೋಕದಲ್ಲಿ ಹೇಳಲಾಗಿದೆ.

ಧೃತಿ: ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧಃ ದಶಕಂ ಧರ್ಮಲಕ್ಷಣಮ್॥

ಇವು ಧರ್ಮದ ಹತ್ತು ಲಕ್ಷಣವೆಂದು ತಿಳಿಸಲಾಗಿದೆ. ಪ್ರತಿಯೊಂದನ್ನು ವಿವರಣಾತ್ಮಕವಾಗಿ ನೋಡೋಣ!

- ಧೃತಿ : ಜೀವನದಲ್ಲಿ ಉಂಟಾಗುವ ಕಷ್ಟ, ನಷ್ಟ, ಮಾನ, ಅಪಮಾನ ಮೊದಲಾದ ಸಂದರ್ಭದಲ್ಲಿ ಧೈರ್ಯಕೆಡದೆ ಮುನ್ನಡೆಯುವ ಶಕ್ತಿ.
- ಕ್ಷಮಾ : ಯಾರಾದರೂ ನಮ್ಮನ್ನು ಬೈದಾಗ, ಅವಮಾನಿಸಿದಾಗ, ನಿಂದಿಸಿದಾಗ ಸಿಟ್ಟುಗೊಳ್ಳದೆ ಪ್ರತಿಕ್ರಿಯೆ ಮಾಡದೆ ಅವರನ್ನು ಕ್ಷಮಿಸುವಂತಹ ಶಕ್ತಿ.
- ದಮ : ಯಾವ ಸಂದರ್ಭದಲ್ಲಿಯೂ ಮನಸ್ಸನ್ನು ಶಾಂತ , ಸಂಕೋಚಕರ, ಹಾಗೂ ಸ್ಥಿರ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದು.
- ಅಸ್ತೇಯ : ಇತರರ ಸೊತ್ತಿಗೆ ಆಸೆ ಪಡದೆ ಇರುವುದು.
- ಶೌಚ : ನಮ್ಮ ದೇಹ, ಬಟ್ಟೆ, ವಾಸಸ್ಥಾನ ಮೊದಲಾದವುಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು.
- ಇಂದ್ರಿಯ ನಿಗ್ರಹ : ಪಂಚೇಂದ್ರಿಯಗಳು ನಮ್ಮ ಹತೋಟಿಯಲ್ಲಿರುವುದು. ಅಂದರೆ ಹೆಚ್ಚಿನ ಸುಖಭೋಗಗಳಿಗೆ ಆಸೆ ಪಡದಂತೆ ಇರುವುದು.
- ಧೀ : ಬುದ್ಧಿಯನ್ನು ಉಪಯೋಗಿಸಿ ಬದುಕುವ ಧೀರ ಸ್ವಭಾವ ಹಾಗೂ ಸ್ವಯಂ ನಿರ್ಧಾರದೊಂದಿಗೆ ವ್ಯವಹರಿಸುವುದು.
- ವಿದ್ಯಾ : ಸಾಕಷ್ಟು ತಿಳುವಳಿಕೆಯನ್ನು ಗಳಿಸಲು ಅಧ್ಯಯನ ಶೀಲವಾಗುವುದು. ಅಲ್ಲದೆ ವಿವೇಕಿಗಳಾದವರ ಮಾತನ್ನು ಕೇಳುತ್ತಾ ಜ್ಞಾನ ಸಂಪಾದನೆಯನ್ನು ಮಾಡುವುದು.
- ಸತ್ಯ : ಯಾವುದೇ ಸಂದರ್ಭದಲ್ಲಿ ಸತ್ಯವನ್ನೇ ಹೇಳುವುದು ಸತ್ಯನುಡಿಯುವುದೇ ನನಗೆ ಹೆಮ್ಮೆ ಎಂದು ತಿಳಿದುಕೊಳ್ಳುವುದು.
- ಅಕ್ರೋಧ : ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡದೆ, ಸಹನೆ, ಸೌಜನ್ಯದಿಂದ ಬದುಕುವುದು.

ಇವು ಹತ್ತು ಗುಣಗಳು ಮಾನವನ ಧರ್ಮಾಚರಣೆಯಲ್ಲಿ ಪ್ರಮುಖವಾಗಿ ಅಳವಡಿಸಿಕೊಳ್ಳಬೇಕಾದ ಗುಣಗಳಾಗಿವೆ. ಇಂತಹ ಗುಣಗಳನ್ನು ಪಾಲಿಸಿಕೊಂಡಲ್ಲಿ ಜೀವನ ಸಾರ್ಥಕವಾಗುವುದೆಂದು ತಿಳಿಯೋಣ.

# ಪೂರ್ಣ ಅವತಾರೀ ಶ್ರೀಕೃಷ್ಣ

- ಮ.ನಾ.ಹೆಬ್ಬಾರ

''ವಸುದೇವ ಸುತಂ ದೇವ ಕಂಸ ಚಾಣೂರ ಮರ್ದನಮ್ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್॥''

ಶ್ರೀಕೃಷ್ಣನು ದೇವನೆಂದೂ, ದೇವಾಧಿದೇವನೆಂದೂ ಪರಿಗಣಿತನಾಗಿ ಲೋಕದಲ್ಲಿ ಪೂಜೆಯನ್ನು ಹೊಂದುತ್ತಿದ್ದಾನೆ. ಅವನು ಮಹಾ ವಿಷ್ಣುವಿನ ಪೂರ್ಣಾವತಾರವೆಂದೇ ಭಕ್ತರ ನಂಬಿಕೆ. ಶ್ರೀ ರಾಮಾದಿಗಳು ವಿಷ್ಣುವಿನ ಪೂರ್ಣಾವತಾರ! ಆತನ ಚರಿತ್ರೆಯನ್ನು ವಿಸ್ತಾರವಾಗಿ ವರ್ಣಿಸಿರುವ ಮಹಾಭಾರತ, ವಿಷ್ಣು ಪುರಾಣ, ಹರಿವಂಶ ಮೊದಲಾದ ಗ್ರಂಥಗಳೆಲ್ಲ ಹಾಗೆಂದೇ ಹೇಳಿದೆ.

''ಯಸ್ತು ನಾರಾಯಣೋನಾಮ ದೇವದೇವಃ ಸನಾತನಃ ।
ತಸ್ಯಾಂಶೋ ಮಾನುಷೇಷ್ವಾಸೀತ್ ವಾಸುದೇವಃ ಪ್ರತಾಪವಾನ್ ॥ ''ಸವಿಷ ಭಗವಾನ್ ವಿಷ್ಣು: ಕೃಷ್ಣೇತಿ ಹರಿಕೀರ್ತ್ಯತೇ''

''ಸಸ್ರಷ್ಟಾ ಜಗತಃ ಕೃಷ್ಣಃ'' ಎಂಬಿವೇ ಮೊದಲಾದ ಮಾತುಗಳನ್ನು ಮಹಾಭಾರತದಲ್ಲಿ ಕಾಣಬಹುದು. ನಮ್ಮ ಪ್ರಸ್ತುತ ವಿಷಯವು 'ಶ್ರೀ ಕೃಷ್ಣನು ವಿಷ್ಣುವಿನ ಪೂರ್ಣಾವತಾರ ಎಂಬುವುದು. ಇಂದಿಗೆ ಸಾಧಾರಣ ಮೂರು ಸಾವಿರದ ನಾಲ್ಕುನೂರು ವರ್ಷಗಳ ಹಿಂದೆ ಶ್ರೀ ಕೃಷ್ಣನು ಜೀವಿಸಿದ್ದನೆಂದು ಮತ್ಸ್ಯ, ವಾಯು, ವಿಷ್ಣು ಮತ್ತು ಭಾಗವತ ಪುರಾಣಗಳೆಲ್ಲ ಹೇಳುತ್ತವೆ.

''ಯಾನತ್ ಪರೀಕ್ಷಿತೋ ಜನ್ಮ ಯಾವನ್ನಂದಾಭಿಷೇಚನಮ್ ।
ಏವಂ ವರ್ಷ ಸಹಸ್ರಂತುಜ್ಞೇಯಂ ಪಂಚದಶೋತ್ತರಮ್॥'' (ಪರೀಕ್ಷಿತ (ಅಭಿಮನ್ಯುವಿನ ಮಗ) ನ ಜನ್ಮಕಾಲದಿಂದ ಪಾಟಲಿಪುತ್ರದಲ್ಲಿ ನಂದನ ಅಭಿಷೇಚನದ ವರೆಗೆ 1015 ವರ್ಷಗಳು ಕಳೆದವು.) ಭಾರತದ ಇತಿಹಾಸದಂತೆ ನಂದನು ಕ್ರಿ.ಪೂ. 343ರಲ್ಲಿ ಪಟ್ಟಕ್ಕೆ ಬಂದನು. ಆದ್ದರಿಂದ ಪರೀಕ್ಷಿತನು ಕ್ರಿ.ಪೂ. 1458ರಲ್ಲಿ ಜನಿಸಿರಬೇಕು. ಅದಕ್ಕೆ ಸ್ವಲ್ಪ ಸಮಯ ಮುಂಚೆ ಮಹಾಭಾರತ ಯುದ್ಧವು ನಡೆದಿರಬೇಕು. ಅಭಿಮನ್ಯುವು ಚಕ್ರವ್ಯೂಹಕ್ಕೆ ಯುದ್ಧಕ್ಕೆ ತೆರಳುವಾಗ ಅವನ ಮಡದಿ ಉತ್ತರೆಯು ಗರ್ಭಿಣಿಯಾಗಿದ್ದಳು. ಜನಿಸಿದ ಶಿಶುವೇ ಪರೀಕ್ಷಿತ. ಮಹಾಭಾರತ ಯುದ್ಧದ ಸೂತ್ರಧಾರನೇ ಶ್ರೀ ಕೃಷ್ಣನಾದುದರಿಂದ ಕ್ರಿ.ಪೂ. ಹದಿನೈದನೆಯ ಶತಮಾನ ಕೃಷ್ಣನ ಜೀವಿತದ ಕಾಲವಾಗಿದೆ.

ಭಗವಂತನು ಲೋಕೋದ್ಧಾರಕ್ಕಾಗಿ ಅನೇಕಾನೇಕ ಸಲ ಭೂಲೋಕದಲ್ಲಿ ಅವತರಿಸಿದನೆಂದೂ, ಅಂತಹ ಅವತಾರಗಳ ಸಂಖ್ಯೆಯನ್ನು ತಿಳಿಯುವುದು. ಅವಶಕ್ಯವೆಂದೂ ಭಾಗವತಕಾರನೇ ಹೇಳಿರುವನು.

ಜಗದುದರನವತಾರ ಸಂಖ್ಯೆಯ
ಬಗೆಯನರಿತವರಾರು ಭೂಪಾಂ-
ಸುಗಳನಭ್ರದ ತಾರೆಗಳನಾಸಾರ ಬಿಂದುಗಳ।
ತೆಗೆದು ಲೆಕ್ಕಿಸಬಹುದು ಭೃಗ್ವಾ-
ದಿಗಳು ಸುರನರವರರು ಮನ್ವಾ-
ದಿಗಳು ಹರಿಯಂಶಾಂಶ ಸಂಭವರಿವರು ಕೇಳೆಂದ॥

ಭೂಮಿಯ ಧೂಳಿನ ಕಣಗಳನ್ನೂ, ಆಕಾಶದಲ್ಲಿನ ನಕ್ಷತ್ರಗಳನ್ನೂ, ಮಳೆಯ ಹನಿಗಳನ್ನೂ ಲೆಕ್ಕಿಸಬಹುದೋ ಏನೋ? ಆದರೆ ಜಗದುದರನಾದ ಭಗವಂತನ ಅವತಾರ ಸಂಖ್ಯೆಯನ್ನು ಊಹಿಸಲು ಬಲ್ಲವರಿಲ್ಲ. ಭೃಗು ಮುಂತಾದವರು, ಮನುಗಳು, ದೇವತೆಗಳು, ವಾನರ ಶ್ರೇಷ್ಠರು, ಮಾನವಶ್ರೇಷ್ಠರು ಇವರೆಲ್ಲ ಶ್ರೀ ಹರಿಯ ಅಂಶಾಂಶಗಳಿಂದ ಜನಿಸಿದವರು. ಇವರಲ್ಲಿ ಕೆಲವರು ವಿಷ್ಣುವಿನ ಅಂಶದಿಂದ ಹುಟ್ಟಿದವರು, ಇನ್ನು ಕೆಲವರು ಕೆಲವು ಕಲೆಗಳಿಂದ ಜನಿಸಿದವರು. ಆದರೆ ಇವರೆಲ್ಲರ ಪೈಕಿ ಯಾದವ ಶಿರೋಮಣಿಯಾದ ಶ್ರೀ ಕೃಷ್ಣನು ಮಾತ್ರ ಸಾಕ್ಷಾತ್ ವಿಷ್ಣುವೇ. ಭೂಮಿಯಲ್ಲಿ ರಾಕ್ಷಸರು ಹೆಚ್ಚಿಕೊಂಡರೆ ಶ್ರೀ ಹರಿಯು ಅವತರಿಸಿ, ಅವರನ್ನು ತರಿದು, ಗೋ-ದ್ವಿಜ-ಸುರರುಗಳನ್ನು ರಕ್ಷಿಸುತ್ತಾನೆ. ಕವಿಯು ಇಂತಹ ಇಪ್ಪತ್ತೆರಡು ಅವತಾರಗಳು ಪ್ರಮುಖವಾದವುಗಳು ಎಂದಿದ್ದಾನೆ. - ಸನಕಾದಿ ಯೋಗಿಗಳು, ಯಜ್ಞವರಾಹ, ನಾರದ, ನರ, ನಾರಾಯಣ, ಕಪಿಲ, ವೃಷಭಯೋಗಿ, ಪೃಥು, ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನಿ, ನರಹರಿ, ವಾಮನ, ದತ್ತಾತ್ರೇಯ, ಪರಶುರಾಮ, ವೇದವ್ಯಾಸ, ಶ್ರೀ ರಾಮ, ಬಲರಾಮ, ಶ್ರೀ ಕೃಷ್ಣ ಬುದ್ಧ ಮತ್ತು ಕಲ್ಕಿ. ಕಲ್ಕಿಯ ಅವತಾರವು ಇನ್ನು ಆಗಬೇಕಷ್ಟೆ!

ಶ್ರೀ ಕೃಷ್ಣನನ್ನು ನಾವು ದೇವರೆಂದು ನಂಬಿ ಪೂಜಿಸಿದರೂ ಅವನು ಮಾತ್ರ ತಾನು ದೇವರಲ್ಲವೆಂದೂ, ತಾನು ಯಾವ ದೈವೀಕೃತ್ಯವನ್ನು ಮಾಡಲಿಲ್ಲವೆಂದೂ ಪುರುಷಾಕಾರದಿಂದ ಮಾಡಬಹುದಾದಷ್ಟನ್ನೇ ಮಾಡಿದೆನೆಂದೂ ಹೇಳಿದ್ದಾನೆ.

(....ಮುಂದಿನ ಸಂಚಿಕೆಯಲ್ಲಿ)

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O)**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು** : ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ

## ಹೊಸ ಬೆಳಕು

**ನಲ್ನುಡಿ :**

*ನಂದಾಮ ಶರದಶ್ಶತಂ, ಮೋದಾಮ ಶರದಶ್ಶತಂ ।*

ಅಂದರೆ ನಾವು ನಮ್ಮ ಬಂಧು ಬಾಂಧವರೊಂದಿಗೆ ನೂರು ವರ್ಷ ನಲಿಯುವಂತಾಗಲಿ.

**ಪುಸ್ತಕ ಪರಿಚಯ :**

***ಜನಪಥ - ಎಂ.ವ್ಯಾಸ***

ಪ್ರಸಿದ್ಧ ಕಥೆಗಾರ, ಕವಿ ಎಂ.ವ್ಯಾಸ ಸುಮಾರು 3 ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಬರೆಯುತ್ತಿದ್ದಾರೆ. ಸುಮಾರು 300ಕ್ಕೂ ಹೆಚ್ಚು ಕಥೆಗಳು, ಸುಮಾರು 300 ಬಿಡಿ ಲೇಖನಗಳು ಮತ್ತು ಸುಮಾರು 250 ಬಿಡಿ ಕವಿತೆಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

'ಜನಪಥ' (ಅಂಕಣ ಬರೆಹಗಳು) ಪುಸ್ತಕ ಇತ್ತೀಚೆಗೆ ಉಡುಪಿಯ 54ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. ಉಷಾಕಿರಣದಲ್ಲಿ ಜನಪಥ ಅಂಕಣಕ್ಕಾಗಿ ಬರೆದ ಲೇಖನಗಳು ಈ ಪುಸ್ತಕ ರೂಪದಲ್ಲಿ ಬಂದಿದೆ. 60 ವಿಶಿಷ್ಟ ಲೇಖನಗಳಿವೆ. 'ಪ್ರಭು ಎಂಬ ಪ್ರಜೆ' ಎಂಬ ಲೇಖನದ ಕೆಲವು ಸಾಲುಗಳು ಹೀಗಿವೆ - ಇತಿಹಾಸ ಮರುಕಳಿಸುತ್ತಲೇ ಇದೆ. ಗುಂಪಿನಿಂದ ಒಬ್ಬ 'ನಾಯಕ' ಎದ್ದು ಬರುತ್ತಾನೆ. ಅವನು 'ರಾಜ'ನಾಗುತ್ತಾನೆ. ಸರ್ವಾಧಿಕಾರಿಯೂ ಆಗುತ್ತಾನೆ. ಸಾಕ್ರೆಟಿಸ್ ಹೇಳಿದಂತೆ ಆಳುವವನು ಆಳಲ್ಪಡುವವನಿಗಿಂತ ಬುದ್ಧಿವಂತನಾಗಿರುತ್ತಾನೆ. ಹೌದೇ.....?

***ಶ್ರೀ ಆದಿಶಂಕರಾಚಾರ್ಯ -ಬಿ.ಬಾಲಚಂದ್ರರಾವ್***

ಬಹುಮುಖ ಪ್ರತಿಭಾ ಸಂಪನ್ನರಾದ ಬಿ. ಬಾಲಚಂದ್ರರಾವ್ (ಬೈಬಾರಾ), ಲಲಿತಪ್ರಬಂಧ, ಕಾವ್ಯ, ನಾಟಕಗಳಲ್ಲಿ ತೊಡಗಿಸಿಕೊಂಡವರು. ಸಂಗೀತ, ಅಭಿನಯಗಳಲ್ಲಿ ಅನುಭವವುಳ್ಳ ಕಲಾಭಿಮಾನಿಗಳು. ನಾಟಕರಂಗ ಶ್ರೀಯುತ ಬಾಲಚಂದ್ರರಾಯರು ಮೆಚ್ಚಿದ ಕ್ಷೇತ್ರ. ಅವರ ಭಾವ, ಶ್ರೀ ಎ. ಪಿ. ಯಶವಂತ ಶರ್ಮರು ಬರೆದ ಶ್ರೀ ಶಂಕರ ಭಗವತ್ಪಾದ ಚರಿತಾಮೃತಮ್ ಎಂಬ ಪದ್ಯರೂಪವನ್ನು ಬಾಲಚಂದ್ರರಾಯರು ನಾಟಕರೂಪಕ್ಕೆ ಅಳವಡಿಸಿಕೊಂಡಿದ್ದಾರೆ. ನಾಲ್ಕು ಅಂಕಗಳ ಈ ನಾಟಕದಲ್ಲಿ ಸುಮಾರು 45 ನಟ ನಟಿಯರಿದ್ದು ಸಂಗೀತ, ಭರತನಾಟ್ಯ ಹಾಗೂ ಯಕ್ಷಗಾನವನ್ನು ಅಳವಡಿಸಿಕೊಂಡಿರುತ್ತಾರೆ. ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥಸ್ವಾಮೀಜಿಯವರ ಅಮೃತಹಸ್ತದಿಂದ ಈ ನಾಟಕ ಪುಸ್ತಕ ಬಿಡುಗಡೆಗೊಂಡಿದೆ.

**- ವೈ. ಮೋಹನರಾವ್**